<u>ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಮ್ಮ ಮನೆ ಕೆರೆಕೊಪ್ಪ ರಸ್ತೆಯಲ್ಲಿ ಇದೆ ಎಂದರೆ ಹೌದು. ಸಾರೇಕೊಪ್ಪದಲ್ಲಿ ಕಾನ್ ಕೇರಿ ರಸ್ತೆ ಮತ್ತು ತವನಂದಿ - ಸೊರಬ ರಸ್ತೆಯನ್ನು ನಾನು ನೋಡಿದ್ದೇನೆ. ರಾಜಪ್ಪನ ಮನೆ ಕಾನಕೇರಿ ರಸ್ತೆಯಲ್ಲಿ ರಸ್ತೆ ಕಡೆ ಮುಖ ಮಾಡಿರುತ್ತದೆ ಎಂದರೆ ಹೌದು. ಹುಣಸೆ ಮಂಜಪ್ಪನ ಮನೆ ತವನಂದಿ - ಸೊರಬ ರಸ್ತೆಗೆ ಮುಖ ಮಾಡಿದೆ ಎಂದರೆ ಹೌದು. ಕಾನಕೇರಿ ರಸ್ತೆಯಿಂದ ಸೊರಬಕ್ಕೆ ಹೋಗುವ ರಸ್ತೆ ಮೂಲಕ ಮಂಜಪ್ಪನ ಮನೆಗೆ ಬರುವುದಾದರೆ ಸುಮಾರು ಒಂದುವರೆ ಕಿ.ಮೀ. ಆಗುತ್ತದೆ ಎಂದರೆ ಸರಿಯಲ್ಲ, ಆದರೆ ಅರ್ಧ ಕಿ.ಮೀ ಆಗುತ್ತದೆ. 1ನೇ ಆರೋಪಿ ಮನೆ ಮತ್ತು ಮತ್ತು ಪಿರ್ಯಾದುದಾರರ ಮನೆ ಹಿತ್ತಲು ಕಾನಕೇರಿ ರಸ್ತೆಗೆ ತಾಗಿಕೊಂಡು ಅಕ್ಕಪಕ್ಕದಲ್ಲಿ ಇದೆ ಎಂದರೆ ಹೌದು. ಪಿರ್ಯಾದುದಾರರ ಮನೆ ಹಿತ್ತಲಿಂದ 1ನೇ ಆರೋಪಿ ಮನೆಗೆ ಹೋಗುವುದಾದರೆ ಸುಮಾರು 25 ಅಡಿ ದೂರ ಆಗುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ, ಅದರೆ ಸ್ವಲ್ಪ ದೂರ ಇದೆ ಎಂದು ನುಡಿಯುತ್ತಾರೆ.

ಘಟನೆಯ ದಿನ ನಾನು ಕಾರಿನಲ್ಲಿ ನನ್ನ ಹೆಂಡತಿ ಮನೆಗೆ ಹೋಗಲು ಸೊರಬ ರಸ್ತೆಯಿಂದ ತವನಂದಿ ರಸ್ತೆ ಕಡೆಗೆ ಹೋಗುತ್ತಿದ್ದೆ. ಆಗ ಸುಮಾರು ಸಂಜೆ 6-00 ಗಂಟೆ ಆಗಿತ್ತು ಎಂದರೆ



ಸರಿಯಲ್ಲ, ಸಂಜೆ 7-00 – 7-30 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ದಿನ ಅಲ್ಲಿ ಗಲಾಟೆ ನಡೆಯುತ್ತಿತ್ತು ನಾನು ಚೇತನ್ ನನ್ನು ಕೈ ಹಿಡಿದು ಎಳೆದುಕೊಂಡು ಬಂದು ನಂತರ ಅವರ ಮನೆಗೆ ಬಿಟ್ಟಿರುತ್ತೇನೆ. ನಂತರ ಸತೀಶನು ಬಂದಿರುತ್ತಾನೆ. ನಂತರ ನಾನು ಕಾರಿನಲ್ಲಿ ನನ್ನ ಹೆಂಡತಿ ಮನೆಗೆ ಹೋದೆ ಎಂದರೆ ಹೌದು.1ನೇ ಆರೋಪಿ ಮತ್ತು ಆತನ ಅಣ್ಣ ಪರಸಪ್ಪನ

ಮನೆ ಕಾನಕೇರಿಯಲ್ಲಿದ್ದು ಅವರ ಮನೆಗೆ ಮುಖ ಮಾಡಿ ಉಳಿದ ಯಾವ ಆರೋಪಿತರ ಮನೆಯು ಇಲ್ಲ ಎಂದರೆ ಹೌದು.

6 ನೇ ಆರೋಪಿ ಲೋಕೇಶನ ಮನೆ ಶಿವಾಜಿ ಸರ್ಕಲ್ ನಿಂದ ಕೆಳಗೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಶನಿ ದೇವರ ದೇವಸ್ಥಾನ ಇದೆ ಎಂದರೆ ಹೌದು. ನಾನು ದಿನಾಂಕಃ 11-06-2019 ರಂದು ಸ್ಥಳ ಪಂಚನಾಮೆಗೆ ಹೋಗಿರುತ್ತೇನೆ. ಸ್ದಳ ಪಂಚನಾಮೆ ಮಾಡುವ ಸಮಯದಲ್ಲಿ ಪೋಲೀಸರು 2 ಕಲ್ಲುಗಳು ಮತ್ತು ಒಂದು ದೊಣ್ಣೆಯನ್ನು ಜಪ್ತು ಮಾಡಿದ್ದು ಸದರಿ ಒಂದು ದೊಣ್ಣೆ ಮತ್ತು 2 ಕಲ್ಲುಗಳನ್ನು ಚೇತನ್ ತಂದು ಇಟ್ಟಿದ್ದನು.

ನಾನು ಸತೀಶ ಮತ್ತು ಚೇತನನನ್ನು ಅವರ ಮನೆಗೆ ಬಿಟ್ಟು ಹೋದ ನಂತರ ಅವರಿಬ್ಬರೂ 1 ನೇ ಆರೋಪಿಯ ಮನೆಗೆ ಹೋಗಿ 1 ನೇ ಆರೋಪಿಯ ಕೊಟ್ಟಿಗೆ ಮತ್ತು ಹಿತ್ತಲನ್ನು ಜೆ.ಸಿ.ಬಿ. ಮೂಲಕ ನಾಶಪಡಿಸಿದ್ದಂತ ಸಂದರ್ಭದಲ್ಲಿ ಚಾಸಾ-2 ಸತೀಶನಿಗೆ ಪೆಟ್ಟಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-2 ರವರ ತಲೆಗೆ ಯಾವಾಗ ಮತ್ತು ಹೇಗೆ ಪೆಟ್ಟಾಯಿತು ಎಂದು ನನಗೆ ಗೊತ್ತಿಲ್ಲ. ನಂತರ ಚಾಸಾ-2 ರವರನ್ನು ರಾತ್ರಿ 8 ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ಗೊತ್ತಾಯಿತು.

ಪಿರ್ಯಾದುದಾರರು ಮತ್ತು ಅವರ ಮನೆಯವರು 1 ನೇ ಆರೋಪಿ ಮನೆಗೆ ನುಗ್ಗಿ ಅವರನ್ನು ಹೊಡೆದು ಪೆಟ್ಟು ಮಾಡಿದ ಕಾರಣ 1 ನೇ ಆರೋಪಿಯನ್ನು ಸೊರಬ ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾರನೇ ದಿನ 1 ನೇ ಆರೋಪಿಯನ್ನು ಮುಂದಿನ ಚಿಕಿತ್ಸೆಗಾಗಿ ಸಾಗರ ಸರ್ಕಾರಿ ಆಸ್ಪತ್ರೆಗೆ ವರ್ಗಾವಣೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.



ಚೇತನ್ ಮತ್ತು ಸತೀಶ ನಾನು ಅವರನ್ನು ಕರೆಯದಿದ್ದರೆ ಅವರು ಅಲ್ಲೇ ಇದ್ದು ಜಗಳ ಮಾಡುತ್ತಿದ್ದರು ಎಂದರೆ ನಾನು ಕರೆದಿದ್ದಕ್ಕೆ ಅವರು ನನ್ನ ಜೊತೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಗಲಾಟೆ ನಡೆಯುವ ಸಂದರ್ಭದಲ್ಲಿ ಚೇತನ್ ರವರ ಅಪ್ಪ ಗಣಪತಪ್ಪ ಸಹ ಗಲಾಟೆಯಲ್ಲಿ ಇದ್ದರು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).